**ಓ ಎಸ್ ನಂಃ 300/2020**
**ಪಿ ಡಬ್ಲ್ಯೂ ಃ 1**

**ದಿಃ 16.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 2 ಪರ ಶ್ರೀ ಆರ್ ಹೆಚ್ ವಕೀಲರಿಂದ :-**

ನಿಪಿ 24 ರ ದಾಖಲಾತಿ ಪ್ರಕಾರ ಎಲ್ ಆರ್ ಎಫ್ 10/1983-84 ಪ್ರಕರಣದಲ್ಲಿ ನಾನು ಪಕ್ಷಗಾರನಾಗಿದ್ದೆ. ಸದರಿ ಪ್ರಕರಣದಲ್ಲಿ ನಾನು ಅರ್ಜಿದಾರ. ಸದರಿ ಅರ್ಜಿಯಲ್ಲಿ ಯಾರು ಯಾರು ಅರ್ಜಿದಾರಾಗಿದ್ದಾರೆ ಹಾಗೂ ಯಾರು ಯಾರು ಪ್ರತಿವಾದಿಗಳಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರ ನನ್ನ ತಂದೆಗೆ ಗೊತ್ತಿರುತ್ತದೆ. ನಮ್ಮ ತಂದೆಯವರು ಮರಣ ಹೊಂದಿದ ನಂತರ ಸದರಿ ಅರ್ಜಿಯಲ್ಲಿ ತಮ್ಮ ತಂದೆಯವರು ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡಲು ಅರ್ಜಿ ಸಲ್ಲಿಸಿದ್ದೀರ ಎಂದರೆ ಸಾಕ್ಷಿಯು ಸಲ್ಲಿಸಿದ್ದೇನೆ. ಸದರಿ ಪ್ರಕರಣವು ಯಾವ ಸರ್ವೆ ನಂ. ಗೆ ಸಂಬಂಧಿಸಿದ್ದು ಎಂದರೆ ಮಾಗಡಿ ಗ್ರಾಮದ ಸರ್ವೆ ನಂ. 226 ರಲ್ಲಿ 3 ಎಕರೆ 10 ಗುಂಟೆ ಐನು ಜಮೀನು, 7 ಗುಂಟೆ ಖರಾಬು ಜಮೀನು. 1974 ರ ನಂತರ ದಾವಾ ಆಸ್ತಿಯ ಸ್ವಾಧೀನ ಸರ್ಕಾರದಲ್ಲಿ ನಿಹಿತವಾಗಿದೆ ಎಂದರೆ ಸರಿಯಲ್ಲ. ತಾವು ದಾವಾ ಸ್ವತ್ತಿನಲ್ಲಿ 1974 ರ ನಂತರ ತಾವಾಗಲಿ ಅಥವಾ ತಮ್ಮ ತಂದೆಯವರಾಗಲಿ ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. ತಾವಾಗಲಿ ಅಥವಾ ತಮ್ಮ ತಂದೆಯವರಾಗಲಿ ದಾವಾ ಸ್ವತ್ತಿಗೆ ತಾವು ಗೇಣಿದಾರರೆಂದು ತೋರಿಸಲು ನಮೂನೆ 7 ರ ಅರ್ಜಿಯನ್ನು ಸಲ್ಲಿಸಿದ್ದೀರ ಎಂದರೆ ಸಾಕ್ಷಿ ನಮ್ಮ ತಂದೆ ಸಲ್ಲಿಸಿರುತ್ತಾರೆ. ಸದರಿ ವಿಚಾರದ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲಾತಿಯನ್ನು ಸಲ್ಲಿಸಿರುತ್ತೇನೆ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ತಾವು ನಮೂನೆ 7 ರ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ತಾವಾಗಲಿ ಅಥವಾ ತಮ್ಮ ತಂದೆಯವರಾಗಲಿ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವತ್ತೂ ಗೇಣಿದಾರರಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**